<u>ಸಾಕ್ಷಿಯನ್ನು ದಿಃ **16.06.2022** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಎಂ ಅರ್ ವಕೀಲರಿಂದಃ</u>**

ಮೇಕೆ ಚಿಕ್ಕಣ್ಣನ ಹೆಂಡತಿ ಹೆಸರು ತ್ಯಾರಮ್ಮ ಎಂದು ಹೇಳಿದ್ದು ಆದರೆ ನಿಜವಾದ ಹೆಸರು ನಾಗಮ್ಮ ಅನ್ನುವುದು ನಿಜ. ಸಣ್ಣ ಕರಿಯಪ್ಪ ಮತ್ತು ಕುರುಡುಲಿಂಗಮ್ಮ ಇವರಿಗೆ ಇಬ್ಬರು ಮಕ್ಕಳು ಅನ್ನುವುದು ನಿಜ. ಅವರ ಈ ದಾವೆಯ 2 ಮತ್ತು 3 ನೇ ಪ್ರತಿವಾದಿಯರು ಅಂದರೆ ಸಿದ್ದಮ್ಮ ಮತ್ತು ಜಯಮ್ಮ ಅನ್ನುವುದು ನಿಜ. ಈ ದಾವೆ ಹಾಕುವಾಗ ಸಿದ್ದಮ್ಮ ಮತ್ತು ಜಯಮ್ಮ ಜೀವಂತ ಇದ್ದಿಲ್ಲ ಅನ್ನುವುದು ನಿಜ.

ದಾವಾ ಜಮೀನು ಬಾಲೇನಹಳ್ಳಿಗೆ ಸೇರಿರುತ್ತದೆ. ದಾವಾ ಸ್ವತ್ತುಗಳು ನನಗೆ, ವಾದಿಯರಿಗೆ ಮತ್ತು 2 ಹಾಗೂ 3 ನೇ ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತು ಅನ್ನುವುದು ನಿಜ. ಮೂಲ ಪುರುಷ ಕರಿಯಪ್ಪನ ಮಗ ಅಜ್ಜಪ್ಪನಿಗೆ ದಾವಾ ಸ್ವತ್ತು ಪೌತಿ ಖಾತೆ ಮೂಲಕ ಬಂದಿತ್ತು ಅನ್ನುವುದು ನಿಜ. ಈಗಲೂ ಸಹ ದಾವಾ ಸ್ವತ್ತಿನ ಖಾತೆ ಸದರಿ ಅಜ್ಜಪ್ಪನ ಹೆಸರಿನಲ್ಲಿಯೇ ಇರುತ್ತದೆ ಅನ್ನುವುದು ನಿಜ. ದಾವಾ ಸ್ವತ್ತುಗಳು ಎಂದೂ ಕರಿಯಪ್ಪನ ವಾರಸುದಾರರು ವಿಭಾಗ ಮಾಡಿಕೊಂಡಿಲ್ಲ ಅನ್ನುವುದು ನಿಜ. ದಾವಾ ಸ್ವತ್ತುಗಳು ನಾವು, ವಾದಿಯರು ಮತ್ತು ಇತರೆ ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿ ಇದ್ದು ಅನುಭವಿಸುತ್ತಾ ಬಂದಿದ್ದೇವೆ ಅನ್ನುವುದು ನಿಜ. ಅದೇ ರೀತಿ ದಾವಾ ಸ್ವತ್ತಿನ ಕಂದಾಯವನ್ನು ಸಹ ಜಂಟಿಯಾಗಿ ಪಾವತಿಸಿದ್ದೇನೆ ಅನ್ನುವುದು ನಿಜ.

ದಾವಾ ಸ್ವತ್ತಿನಲ್ಲಿ 50 ಬೇವಿನ ಮರಗಳು ಇವೆ ಅನ್ನುವುದು ನಿಜ. ಅದರಲ್ಲಿ ಎರಡು ಹುಣಸೆ ಮರ ಇವೆ ಅನ್ನುವುದು ನಿಜ. ಇದರಿಂದ ಬಂದಂತಹ ಫಸಲನ್ನು ಜಂಟಿಯಾಗಿ ಅನುಭವಿಸಿದ್ದೇವೆ ಅನ್ನುವುದು ನಿಜ. ಬಾಲೇನಹಳ್ಳಿ ಗ್ರಾಮದ 108/1 ಇದು ನನ್ನ ಯಜಮಾನರ ಸ್ವಯಾರ್ಜಿತ ಸ್ವತ್ತು ಅನ್ನುವುದು ನಿಜ.

**<u>ಈ ಹಂತದಲ್ಲಿ 2 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.</u>**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.